# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03

ಸಂಖ್ಯೆ:ಬಿ3/2019/ಪರೀಕ್ಷೆ/ಪೂ.ಉ..ಖ.19/2018-19 ದಿನಾಂಕ: 27.02.2019

## ಜ್ಞಾಪನ

ವಿಷಯ: ಮಾಚ್/ಏಪ್ರಿಲ್-2019ರ ಎಸ್.ಎಸ್.ಎಲ್.ಸಿ. ಮುಖ್ಯ ಪರೀಕ್ಷೆಯ ಮುಖ್ಯ ಉತ್ತರ ಪತ್ರಿಕೆ ಬುಕ್‌ಲೆಟ್ ಹಾಗೂ ಹೆಚ್ಚುವರಿ ಪುರವಣಿಗಳ ಉತ್ತರ ಪತ್ರಿಕೆಗಳನ್ನು ಮಂಡಳಿಯ ಅಧಿಕೃತ ಗುತ್ತಿಗೆದಾರರಿಂದ ಸರಬರಾಜು ಮಾಡುತ್ತಿರುವುದನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸ್ವೀಕರಿಸಿ, ಬ್ಲಾಕ್ ವ್ಯಾಪ್ತಿಯ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳಿಗೆ ವಿತರಿಸುವ ಬಗೆಗೆ,

ಉಲ್ಲೇಖ: ಮಂಡಳಿ ಸುತ್ತೋಲೆ ಸಂಖ್ಯೆ: ಸಿ1/SSLC/ಪ.ಸು-2019/38/2018-19 ದಿನಾಂಕ: 08.01.2019.

* * * *

ಮಾರ್ಚ್/ಏಪ್ರಿಲ್-2019ರ ಎಸ್.ಎಸ್.ಎಲ್.ಸಿ. ಮುಖ್ಯ ಪರೀಕ್ಷೆ ದಿನಾಂಕ: 21.03.2019ರಿಂದ ದಿನಾಂಕ: 04.04.2019ರ ವರೆಗೆ ನಡೆಸಲು ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಪರೀಕ್ಷೆ ಅನುಷ್ಠಾನಕ್ಕೆ ಶಿಕ್ಷಣ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕರ್ತವ್ಯ ಮತ್ತು ಜವಾಬ್ದಾರಿ ಮಾರ್ಗಸೂಚಿಗಳನ್ನೊಳಗೊಂಡಿರುವ ಉಲ್ಲೇಖದ ದಿನಾಂಕ: 08.01.2019 ಸುತ್ತೋಲೆಯನ್ನು ಮಂಡಳಿಯಿಂದ ಹೊರಡಿಸಲಾಗಿದೆ.

**ಪ್ರಸ್ತುತ, ಉತ್ತರ ಪತ್ರಿಕೆಗಳ ಸ್ವೀಕೃತಿ, ನಿರ್ವಹಣೆ, ವಿತರಣೆ ಮತ್ತು ಉಳಿಕೆ ಉತ್ತರ ಪತ್ರಿಕೆಗಳನ್ನು ಮಂಡಳಿಗೆ ಹಿಂದಿರುಗಿಸುವಿಕೆಗೆ ಸಂಬಂಧಪಟ್ಟಂತೆ ಉಪನಿರ್ದೇಶಕರು (ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎಸ್.ಎಸ್.ಎಲ್.ಸಿ. ನೋಡಲ್ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಉಪಮುಖ್ಯ ಅಧೀಕ್ಷಕರು ಮತ್ತು ಕಸ್ಟೋಡಿಯನ್‌ಗಳು ಕೆಳಕಂಡ ಕ್ರಮಗಳನ್ನು ಅನುಸರಿಸಲು ಸೂಚಿಸಿದೆ.**

ಪ್ರಸ್ತುತ ವರ್ಷವೂ, ಕಳೆದ ಸಾಲಿನ ಪರೀಕ್ಷಾ ಪದ್ದತಿಯನ್ನು ಮುಂದುವರೆಸಿ, ಕೆಳಕಂಡ ಎರಡು ವಿಧಗಳ ಮುಖ್ಯ ಉತ್ತರ ಪತ್ರಿಕೆ ಮತ್ತು ಒಂದು ವಿಧದ ಹೆಚ್ಚುವರಿ ಪತ್ರಿಕೆಗಳನ್ನು ಸಿದ್ಧಪಡಿಸಲಾಗಿದ್ದು ಇವುಗಳ ಬಳಕೆಯ ವಿವರ ಕೆಳಕಂಡಂತಿದೆ.

| ಕ್ರ. ಸಂ. | ಉತ್ತರ ಪತ್ರಿಕೆ ವಿಧ | ಬಳಕೆ |
|---|---|---|
| 1 | 20 ಪುಟಗಳ ಮುಖ್ಯ ಉತ್ತರ ಪತ್ರಿಕೆ | ಗಣಿತ ವಿಷಯ ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಿಗೆ ಬಳಸುವುದು |
| 2 | **28 ಪುಟಗಳ ಮುಖ್ಯ ಉತ್ತರ ಪತ್ರಿಕೆ (ಗ್ರಾಫ್ ಹಾಳೆ ಒಳಗೊಂಡಂತೆ)** | **ಗಣಿತ ವಿಷಯಕ್ಕೆ ಮಾತ್ರ ಬಳಸುವುದು** |
| 3 | 04 ಪುಟಗಳ ಹೆಚ್ಚುವರಿ ಪುರವಣಿಗಳ ಉತ್ತರ ಪತ್ರಿಕೆ | ವಿದ್ಯಾರ್ಥಿಗಳ ಬೇಡಿಕೆ ಮೇರೆಗೆ ಎಲ್ಲಾ ವಿಷಯಗಳಿಗೂ ವಿತರಿಸುವುದು |

- ಮೂರು ವಿಧಗಳ ಉತ್ತರ ಪತ್ರಿಕೆಗಳನ್ನು, ಪರೀಕ್ಷಾ ಕೇಂದ್ರವಾರು ನೋಂದಣಿಯಾಗಿರುವ ಅಭ್ಯರ್ಥಿಗಳ ಸಂಖ್ಯಾಬಲ ಹಾಗೂ ಬರೆಯಲಿರುವ ಒಟ್ಟು ವಿಷಯಗಳ ಸಂಖ್ಯಾಬಲ ಪರಿಗಣಿಸಿ, ಪರೀಕ್ಷಾ ಕೇಂದ್ರವಾರು ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಮಾಡಿ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳಿಗೆ ಮಂಡಳಿಯ ಅಧಿಕೃತ ಗುತ್ತಿಗೆದಾರರಿಂದ ನೇರವಾಗಿ ಸರಬರಾಜು ಮಾಡಲಾಗುವುದು.

- ಖಾಲಿ ಉತ್ತರಪತ್ರಿಕೆಗಳು ಗೌಪ್ಯ ಸಾಮಗ್ರಿಗಳಾಗಿರುವುದರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಾವೇ ಖುದ್ದಾಗಿ ಸಿಬ್ಬಂದಿಯವರೊಂದಿಗೆ ಉಪಸ್ಥಿತರಿದ್ದು ಗುತ್ತಿಗೆದಾರರು ಮಾರ್ಗದ ಮುಖಾಂತರ ಸರಬರಾಜು ಮಾಡುವ ದಿನದಂದು ಉತ್ತರ ಪತ್ರಿಕೆ ಬಂಡಲ್‌ಗಳನ್ನು ಸ್ವೀಕರಿಸಿ, ಡೆಲವರಿ ಚಲನ್‌ನಲ್ಲಿ ನಮೂದಿಸಿರುವ ಪರಿಮಾಣ ಸ್ವೀಕೃತವಾಗಿರುವ ಬಗ್ಗೆ ಪರಿಶೀಲಿಸಿಕೊಂಡು, ಕೂಡಲೇ ಸ್ವೀಕೃತಿ ನೀಡುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಚೇರಿಯಲ್ಲಿ ಲಭ್ಯವಿಲ್ಲದ ಪಕ್ಷದಲ್ಲಿ, ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿಗೆ ಉತ್ತರಪತ್ರಿಕೆಗಳನ್ನು ಸ್ವೀಕರಿಸಿ, ಸ್ವೀಕೃತಿ ನೀಡಲು ಸ್ಪಷ್ಟವಾಗಿ ಸೂಚಿಸತಕ್ಕದ್ದು.

- ಕಳೆದ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕೆಲವು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳಲ್ಲಿ ಉತ್ತರ ಪತ್ರಿಕೆಗಳನ್ನು ಸ್ವೀಕರಿಸಲು ವಿಳಂಬ ಮಾಡುವ ಹಾಗೂ ಸ್ವೀಕೃತಿಗಳನ್ನು ನೀಡಲು ವಿಳಂಬಿಸಿರುವ ಬಗ್ಗೆ ದೂರುಗಳು ದಾಖಲಾಗಿರುತ್ತವೆ. ಆದ್ದರಿಂದ ಉತ್ತರಪತ್ರಿಕೆಗಳ ಸ್ವೀಕರಣೆಗೆ ಆದ್ಯತೆ ನೀಡತಕ್ಕದ್ದು ಹಾಗೂ ಉತ್ತರಪತ್ರಿಕೆಗಳು ಕಚೇರಿ ಸಮಯದ ನಂತರವೂ ಸಹ ಸರಬರಾಜಾಗುವ ಸಂಭವ ಇರುವುದರಿಂದ, ಪರೀಕ್ಷಾ ದೃಷ್ಟಿಯಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕಚೇರಿ ಅಧಿಕಾರಿ ವರ್ಗ ಮತ್ತು ಸಿಬ್ಬಂದಿ ಹಾಜರಿದ್ದು ಉತ್ತರ ಪತ್ರಿಕೆಗಳನ್ನು ಸ್ವೀಕರಿಸುವುದು.

- ಸ್ವೀಕರಿಸಿದ ಉತ್ತರ ಪತ್ರಿಕೆಗಳನ್ನು ಕಚೇರಿಯಲ್ಲಿ ಭದ್ರತಾ ಕೊಠಡಿಯನ್ನು ಗುರುತಿಸಿ ಸುರಕ್ಷಿತವಾಗಿ ಮಳೆ ಅಥವಾ ಇನ್ನಿತರೆ ಯಾವುದೇ ಕಾರಣಗಳಿಂದ ಅನಾಹುತವಾಗದಂತೆ ಎಚ್ಚರಿಕೆ ವಹಿಸಿ, ಭದ್ರತಾ ಕೊಠಡಿಯಲ್ಲಿ ಶೇಖರಿಸಿಟ್ಟು ಬೀಗ ಹಾಕಿ ಮೊಹರು ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವಶದಲ್ಲಿಟ್ಟುಕೊಳ್ಳುವುದು.

- **ಕ್ಷೇತ್ರ ಶಿಕ್ಷಣಾಧಿಕಾರಿಗಳು ಉತ್ತರಪತ್ರಿಕೆಗಳನ್ನು ಸ್ವೀಕರಿಸಿದ ಕೂಡಲೇ, ಆದ್ಯತೆ ನೀಡಿ, ಉತ್ತರಪತ್ರಿಕೆಗಳ ಗುಣಮಟ್ಟ ಪರೀಕ್ಷೆಗಾಗಿ, 20 ಪುಟಗಳ ಮುಖ್ಯ ಉತ್ತರ ಪತ್ರಿಕೆ, 28 ಪುಟಗಳ ಮುಖ್ಯ ಉತ್ತರ ಪತ್ರಿಕೆ ಮತ್ತು 04 ಪುಟಗಳ ಹೆಚ್ಚುವರಿ ಪುರವಣಿ ಉತ್ತರ ಪತ್ರಿಕೆಗಳಲ್ಲಿ, ಯಾದೃಚ್ಛಿಕ ವಿಧಾನದಲ್ಲಿ ತಲಾ 02 ಉತ್ತರ ಪತ್ರಿಕೆಗಳನ್ನು ಆಯ್ಕೆಮಾಡಿ, ದೃಢೀಕರಿಸಿ, ಮೊಹರು ಮಾಡಿದ ಲಕೋಟೆಗಳಲ್ಲಿ, ಸಂಬಂಧಪಟ್ಟ ವ್ಯಾಪ್ತಿಯ ಉಪನಿರ್ದೇಶಕರು(ಆಡಳಿತ) ರವರಿಗೆ ಸಲ್ಲಿಸತಕ್ಕದ್ದು.**

- **ಉಪನಿರ್ದೇಶಕರು(ಆಡಳಿತ) ರವರು, ತಮ್ಮ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳಿಂದ, ವಿಳಂಬಕ್ಕೆ ಆಸ್ಪದವಿಲ್ಲದಂತೆ ಕಾಲಮಿತಿಯಲ್ಲಿ, ಮೇಲೆ ತಿಳಿಸಿದಂತೆ ಗುಣಮಟ್ಟ ಪರೀಕ್ಷೆಗಾಗಿ ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿ, ಅಧಿಕಾರಿ/ಸಹಾಯಕರನ್ನು ನಿಯೋಜಿಸಿ ಮಂಡಳಿಯ ಶಾಖಾಧಿಕಾರಿಗಳು 'ಬಿ' ಶಾಖೆಗೆ ನೇರವಾಗಿ ಖುದ್ದಾಗಿ ಸಲ್ಲಿಸತಕ್ಕದ್ದು, ಸ್ವೀಕರಿಸಲಾದ ಉತ್ತರ ಪತ್ರಿಕೆಗಳನ್ನು "ತುರ್ತು ಅಂಚೆ" ಮೂಲಕ ರವಾನಿಸಲು ಅವಕಾಶವಿಲ್ಲ. ನಿಯೋಜಿತ ಸಿಬ್ಬಂದಿಯು ನಿಯಮಾನುಸಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಬಿಲ್ ತಯಾರಿ ಸಿ, ಮಂಡಳಿಯ ಲೆಕ್ಕಪತ್ರ ಶಾಖೆಗೆ ಸಲ್ಲಿಸತಕ್ಕದ್ದು.**

- ಕ್ಷೇತ್ರ ಶಿಕ್ಷಣಾಧಿಕಾರಿಗಳು ಸ್ವೀಕರಿಸಿರುವ ಪರೀಕ್ಷಾ ಕೇಂದ್ರವಾರು ಉತ್ತರ ಪತ್ರಿಕೆಗಳನ್ನು ದಾಸ್ತಾನು ವಹಿಗೆ ತೆಗೆದುಕೊಂಡು, ಬ್ಲಾಕ್ ವ್ಯಾಪ್ತಿಯ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳಿಗೆ ಉತ್ತರ ಪತ್ರಿಕೆಗಳನ್ನು, ಡೆಲಿವರಿ ಚಲನ್‌ನಲ್ಲಿ, ಪರೀಕ್ಷಾ ಕೇಂದ್ರವಾರು ಬಂಡಲ್‌ಗಳ ಮೇಲೆ ನಮೂದಿಸಿರುವ ಉತ್ತರ ಪತ್ರಿಕೆಗಳ ಕ್ರಮ ಸಂಖ್ಯೆ ಅನುಸಾರ ವಿತರಿಸತಕ್ಕದ್ದು.

- ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳು ಮತ್ತು ಕಸ್ಟೋಡಿಯನ್(ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಸಂರಕ್ಷಣೆಯ ಅಭಿರಕ್ಷಕರು) ಉತ್ತರ ಪತ್ರಿಕೆಗಳನ್ನು, ಡೆಲಿವರಿ ಚಲನ್‌ನಲ್ಲಿ ಪರೀಕ್ಷಾ ಕೇಂದ್ರವಾರು ಬಂಡಲ್‌ಗಳ ಮೇಲೆ ನಮೂದಿಸಿರುವ ಉತ್ತರ ಪತ್ರಿಕೆಗಳ ಕ್ರಮ ಸಂಖ್ಯೆ ಅನುಸಾರ ಸ್ವೀಕರಿಸಿ, ಉತ್ತರ ಪತ್ರಿಕೆಗಳ ಪರಿಮಾಣ ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ ಅನುಗುಣವಾಗಿರುವ ಬಗ್ಗೆ ಪರಿಶೀಲಿಸಿಕೊಂಡು, ಪರೀಕ್ಷಾ ಕೇಂದ್ರದಲ್ಲಿ ಸುರಕ್ಷಿತವಾಗಿ ದಾಸ್ತಾನು ಮಾಡುವುದು ಮತ್ತು ದಾಸ್ತಾನು ವಹಿಗೆ ದಾಖಲಿಸಿ, ಲೆಕ್ಕಾಚಾರ ನಿರ್ವಹಣೆ ಮಾಡತಕ್ಕದ್ದು.

- **ಎರಡು ವಿಧಗಳ ಮುಖ್ಯ ಉತ್ತರ ಪತ್ರಿಕೆಗಳನ್ನು, ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳ ಬರೆಯಲಿರುವ ಒಟ್ಟು ವಿಷಯಗಳ ಸಂಖ್ಯಾಬಲದ ಮೇಲೆ, ಹೆಚ್ಚುವರಿ ಉತ್ತರ ಪತ್ರಿಕೆಗಳನ್ನು ಎಲ್ಲಾ ವಿದ್ಯಾರ್ಥಿಗಳು ಬಳಸದಿರುವುದರಿಂದ, ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳು ಬರೆಯಲಿರುವ ಒಟ್ಟು ವಿಷಯಗಳ ಸಂಖ್ಯಾಬಲದ ಮೇಲೆ, ಶೇಕಡ 20ರಂತೆ ಮಂಡಳಿ ಸರಬರಾಜು ಮಾಡಿದೆ.**

- ಹೆಚ್ಚುವರಿ ಉತ್ತರ ಪತ್ರಿಕೆಗಳನ್ನು ಎಲ್ಲಾ ವಿದ್ಯಾರ್ಥಿಗಳು ಬಳಸದಿರುವುದರಿಂದ, ಮುಖ್ಯವಾಗಿ ಎರಡು ವಿಧಗಳ ಮುಖ್ಯ ಉತ್ತರ ಪತ್ರಿಕೆಗಳ ಪರಿಮಾಣ, ಪರೀಕ್ಷಾ ಕೇಂದ್ರಗಳಲ್ಲಿನ ವಿದ್ಯಾರ್ಥಿಗಳು ಬರೆಯಲಿರುವ ಒಟ್ಟು ವಿಷಯಗಳ ಸಂಖ್ಯಾಬಲಕ್ಕೆ ಅನುಗುಣವಾಗಿರುವ ಬಗ್ಗೆ ಪರೀಕ್ಷಿಸಿಕೊಳ್ಳುವುದು, ಕೊರತೆ ಇದ್ದ ಪಕ್ಷದಲ್ಲಿ ಕೂಡಲೇ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಮಂಡಳಿಯ ಗಮನಕ್ಕೆ ತರತಕ್ಕದ್ದು. ಕೊರತೆ ಉತ್ತರ ಪತ್ರಿಕೆಗಳನ್ನು ಮಂಡಳಿಯ ವತಿಯಿಂದ ರವಾನಿಸಲಾಗುವುದು.

- ಪರೀಕ್ಷಾ ದಿನಗಳಂದು, ಉತ್ತರ ಪತ್ರಿಕೆಗಳನ್ನು ಬಂಡಲ್ ಕ್ರಮ ಸಂಖ್ಯೆ ಮತ್ತು ಉತ್ತರ ಪತ್ರಿಕೆಗಳ ಅನುಕ್ರಮ ಸಂಖ್ಯೆಯ ಸರಣಿವಾರು ಪ್ರಕಾರ ಕ್ರಮಬದ್ಧವಾಗಿ ವಿತರಿಸುವುದು, ಇದರಿಂದ ಉಳಿಕೆ ಉತ್ತರ ಪತ್ರಿಕೆಗಳ ಲೆಕ್ಕಾಚಾರ ಸರಳವಾಗಲಿದ್ದು, ಬಂಡಲ್‌ಗಳನ್ನು ಅನುಕ್ರಮ ಸಂಖ್ಯೆಯ ಸರಣಿವಾರು ವಿತರಿಸದೆ, ಅವ್ಯವಸ್ಥಿತ ರೀತಿಯಲ್ಲಿ/ಕ್ರಮಭಂಗ ಮಾಡಿ ಬಳಸಕೂಡದು.

- ಅನಿರೀಕ್ಷಿತ ಮತ್ತು ಆಕಸ್ಮಿಕ ಸಂದರ್ಭಗಳಲ್ಲಿ, ಅಲ್ಪ ಪ್ರಮಾಣದ ಉತ್ತರ ಪತ್ರಿಕೆ ಕೊರತೆ ಕಂಡು ಬಂದಲ್ಲಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಮ್ಮ ವ್ಯಾಪ್ತಿಯ ಇತರೆ ಪರೀಕ್ಷಾ ಕೇಂದ್ರಗಳಲ್ಲಿ ಉಳಿಕೆಯಾಗುವ ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿ, ಕೊರತೆ ಇರುವ ಪರೀಕ್ಷಾ ಕೇಂದ್ರಗಳಿಗೆ ವಿತರಿಸಿ, ಈ ಬಗ್ಗೆ ಮಂಡಳಿಗೆ ವರದಿ ಸಲ್ಲಿಸುವುದು.

- **ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಮುಕ್ತಾಯವಾದ ನಂತರ, ಪರೀಕ್ಷಾ ಕೇಂದ್ರದ ಅಧೀಕ್ಷಕರು, ಎಲ್ಲಾ ವಿಧಗಳ ಉಳಿಕೆ ಉತ್ತರ ಪತ್ರಿಕೆಗಳನ್ನು ಬಂಡಲ್ ಮಾಡಿ, ಪ್ರಶ್ನೆ ಪತ್ರಿಕೆ ವಿತರಿಸುವ/ಉತ್ತರ ಪತ್ರಿಕೆ ಸಂಗ್ರಹಿಸುವ ಮಾರ್ಗಾಧಿಕಾರಗಳ ಮುಖಾಂತರ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಸ್ತಾಂತರಿಸುವುದು. ಉಳಿಕೆ ಉತ್ತರ ಪತ್ರಿಕೆಗಳನ್ನು ನೇರವಾಗಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಂದ ಮಂಡಳಿಗೆ ಸಲ್ಲಿಸಲು ಅವಕಾಶವಿರುವುದಿಲ್ಲ ಈ ಬಗ್ಗೆ ಪರೀಕ್ಷಾ ಕೇಂದ್ರದ ಅಧೀಕ್ಷಕರು ಮತ್ತು ನೋಡಲ್ ಅಧಿಕಾರಿಗಳು ವಿಶೇಷ ಕ್ರಮವಹಿಸುವುದು.**

- ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪರೀಕ್ಷಾ ಕೇಂದ್ರಗಳಿಂದ ಸ್ವೀಕರಿಸಿದ ಉಳಿಕೆ ಉತ್ತರ ಪತ್ರಿಕೆಗಳನ್ನು, ಉಪನಿರ್ದೇಶಕರು(ಆಡಳಿತ) ರವರ ಕಚೇರಿಗಳಿಗೆ ಹಸ್ತಾಂತರಿಸತಕ್ಕದ್ದು. ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಮ್ಮ ವ್ಯಾಪ್ತಿಯ ಎಲ್ಲಾ ಪರೀಕ್ಷಾ ಕೇಂದ್ರಗಳ ಉಳಿಕೆ ಉತ್ತರ ಪತ್ರಿಕೆಗಳು ಸ್ವೀಕೃತವಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

- **ಉಪನಿರ್ದೇಶಕರು(ಆಡಳಿತ) ರವರು, ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕರಿಸಿದ, ಉಳಿಕೆ ಉತ್ತರ ಪತ್ರಿಕೆಗಳನ್ನು ಭದ್ರತಾ ಕೊಠಡಿಗಳಲ್ಲಿ ಸಂಗ್ರಹಿಸಿ, ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳನ್ನು ಮಂಡಳಿಗೆ ರವಾನಿಸಲು ನಿಯೋಜಿಸಲಾಗುವ ಅಧಿಕಾರಿ ಮತ್ತು ಸಿಬ್ಬಂದಿ ಮೂಲಕ, ಮಂಡಳಿ ನಿಯೋಜಿಸುವ ಸರಕು ಸಾಗಾಣಿಕೆ ವಾಹನಗಳಲ್ಲಿಯೇ ತುಂಬಿಸಿ ಮಂಡಳಿಗೆ ಹಸ್ತಾಂತರಿಸುವುದು. ಉಳಿಕೆ ಉತ್ತರ ಪತ್ರಿಕೆಗಳನ್ನು ಮಂಡಳಿಗೆ ರವಾನಿಸಲು ಪ್ರತ್ಯೇಕ ವಾಹನಗಳ ವ್ಯವಸ್ಥೆ ಇರುವುದಿಲ್ಲ, ಉತ್ತರ ಪತ್ರಿಕೆ ಉಳಿಸಿಕೊಂಡ ಪಕ್ಷದಲ್ಲಿ, ಸಂಬಂಧಪಟ್ಟ ಕಚೇರಿಯ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ತಮ್ಮ ಸ್ವಂತ ಖರ್ಚಿನಲ್ಲಿ ಉಳಿಕೆ ಉತ್ತರಪತ್ರಿಕೆಗಳನ್ನು ಮಂಡಳಿಗೆ ರವಾನಿಸತಕ್ಕದ್ದು.**

- **ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಯ ವ್ಯಾಪ್ತಿಯ ಪರೀಕ್ಷಾ ಕೇಂದ್ರದ ಅಧೀಕ್ಷಕರುಗಳು ಉಳಿಕೆ ಉತ್ತರ ಪತ್ರಿಕೆಗಳನ್ನು ಪರೀಕ್ಷೆಯ ಮುಕ್ತಾಯ ದಿನದಂದು ನೇರವಾಗಿ ಮಂಡಳಿಗೆ ಸರಬರಾಜು ಮಾಡುತ್ತಿದ್ದು, ಈ ಕ್ರಮಕ್ಕೆ ಅವಕಾಶ ಇರುವುದಿಲ್ಲ. ಆದಾಗ್ಯೂ ಪರೀಕ್ಷಾ ಕೇಂದ್ರದ ಅಧೀಕ್ಷಕರು ಮಂಡಳಿಗೆ ಉಳಿಕೆ ಉತ್ತರ ಪತ್ರಿಕೆಗಳನ್ನು ತಂದ ಪಕ್ಷದಲ್ಲಿ ಸ್ವೀಕರಿಸಲಾಗುವುದಿಲ್ಲ ಹಾಗೂ ಅವರ ಸ್ವಂತ ಖರ್ಚಿನಲ್ಲಿಯೇ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಿಂದಿರುಗಿಸಬೇಕಾಗಿರುತ್ತದೆ. ಬೇರೆ ಜಿಲ್ಲೆಗಳಲ್ಲಿ ಕ್ರಮವಹಿಸಿದಂತೆ ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯವರೂ ಸಹ ಕ್ರಮವಹಿಸಲು ಸೂಚಿಸಿದೆ.**

(ವಿ. ಸುಮಂಗಲ)
ನಿರ್ದೇಶಕರು, ಪರೀಕ್ಷೆಗಳು

ಪ್ರತಿಯನ್ನು,

1) ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ. ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಎಸ್.ಎಸ್.ಎಲ್.ಸಿ. ಪರೀಕ್ಷಾ ನೋಡಲ್ ಅಧಿಕಾರಿಗಳು, ಜಿಲ್ಲಾ ಉಪನಿರ್ದೇಶಕರು(ಆಡಳಿತ) ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ. ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ, ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಮುಖಾಂತರ ಮುಂದಿನ ಸೂಕ್ತ ಕ್ರಮಕ್ಕಾಗಿ.
4) ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರುಗಳು, ಉಪಮುಖ್ಯ ಅಧೀಕ್ಷಕರು, ಮತ್ತು ಕಸ್ಟೋಡಿಯನ್‌ಗಳು, ಇವರುಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರ ಮುಖಾಂತರ ಮುಂದಿನ ಸೂಕ್ತ ಕ್ರಮಕ್ಕಾಗಿ.